# ಪ್ರಧಾನ ಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ (PMJJBY)ಯ ನಿಯಮಗಳು

**ಯೋಜನೆಯ ವಿವರಗಳು**

ಯೋಜನೆಯು ಒಂದು ವರ್ಷ ಅವಧಿಯದಾಗಿದ್ದು, ವರ್ಷದಿಂದ ವರ್ಷಕ್ಕೆ ನವೀಕರಿಸಿಕೊಳ್ಳಬಹುದಾಗಿದೆ.ಯಾವುದೇ ಕಾರಣದಿಂದ ಸಂಭವಿಸುವ ಮರಣಕ್ಕೆ ಜೀವವಿಮೆಯನ್ನು ಈ ಯೋಜನೆ ನೀಡುತ್ತದೆ. ಭಾರತೀಯ ಜೀವವಿಮಾ ನಿಗಮ ಹಾಗೂ ಇಚ್ಚೆಯುಳ್ಳ ಇತರ ಜೀವವಿಮಾ ಕಂಪೆನಿಗಳು ಸೂಕ್ತ ಅನುಮೋದನೆಯೊಂದಿಗೆ ಯೋಜನೆಯ ಶರತ್ತುಗಳಿಗೆ ಅನುಗುಣವಾಗಿ ಸಂಬಂಧಿತ ಬ್ಯಾಂಕ್‌ಗಳ ಸಹಭಾಗಿತ್ವದೊಂದಿಗೆ ಈ ಯೋಜನೆಯನ್ನು ನೀಡುತ್ತವೆ ಮತ್ತು ನಿರ್ವಹಿಸುತ್ತವೆ. ಯೋಜನೆಯ ಭಾಗೀದಾರ ಬ್ಯಾಂಕ್‌ಗಳು ಅಂಥ ಯಾವುದೇ ವಿಮಾ ಕಂಪೆನಿಗಳನ್ನು ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಲು ಸ್ವತಂತ್ರವಾಗಿವೆ.

**ಯೋಜನಾ ವ್ಯಾಪ್ತಿ**

ಯೋಜನೆಯ ಭಾಗೀದಾರ ಬ್ಯಾಂಕ್‌ಗಳಲ್ಲಿನ ೧೮ರಿಂದ ೫೦ರ ವಯೋಮಿತಿಯ ಎಲ್ಲ ಖಾತಾದಾರರು ಯೋಜನೆಗೆ ಸೇರಲು ಅರ್ಹರು.ಬೇರೆ ಬೇರೆ ಅಥವಾ ಒಂದೇ ಬ್ಯಾಂಕ್‌ನಲ್ಲಿ ಒಂದಕ್ಕಿಂತ ಹೆಚ್ಚು ಖಾತೆಗಳನ್ನು ಹೊಂದಿರುವವರು ಯಾವುದಾದರೂ ಒಂದು ಖಾತೆಯ ಮೂಲಕ ಮಾತ್ರ ಯೋಜನೆಗೆ ಸೇರಲು ಅವಕಾಶವಿದೆ.ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್ ಪ್ರಾಥಮಿಕ 'ನಿಮ್ಮ ಗ್ರಾಹಕರನ್ನು ಅರಿಯಿರಿ' (ಏಜಅ)ದಾಖಲೆಯಾಗಿರುತ್ತದೆ.

**ನೋಂದಣಾ ಅವಧಿ**

ಯೋಜನೆಯ ಜಾರಿ ಅವಧಿಯಲ್ಲಿ ಅಂದರೆ, ೧ ಜೂನ್ ೨೦೧೫ರಿಂದ ೩೧ ಮೇ ೨೦೧೬ರವರೆಗಿನ ಅವಧಿಗೆ ಚಂದಾದಾರರು ೩೧ ಮೇ ೨೦೧೫ರೊಳಗಾಗಿ ಯೋಜನೆಗೆ ನೋಂದಾವಣೆಗೊಂಡು, ಪ್ರೀಮಿಯಮ್ ಮೊತ್ತವನ್ನು ತಮ್ಮ ಉಳಿತಾಯ ಖಾತೆಯಿಂದ ಸ್ವಯಂಚಾಲಿತ ಕಟಾವಣೆಗೆ ಒಪ್ಪಿಗೆಯನ್ನು ನೀಡಬೇಕು. ಈ ಸಾಲಿಗೆ ಅವಧಿ ಮೀರಿದ ನೋಂದಾವಣೆಗೆ ೩೧ ಆಗಸ್ಟ್ ೨೦೧೫ರವರೆಗೆ ಹೆಚ್ಚುವರಿ ಅವಕಾಶವನ್ನು ಭಾರತ ಸರ್ಕಾರ ನೀಡಿದೆ ಹಾಗೂ ಮತ್ತೆ ೩ ತಿಂಗಳ ಅವಧಿಗೆ ಅಂದರೆ, ೩೧ ನವೆಂಬರ್ ೨೦೧೫ರವರೆಗೆ ಇದನ್ನು ಮುಂದುವರಿಸುವ ಸಾಧ್ಯತೆಗಳೂ ಇವೆ. ಈ ಮುಂದುವರಿದ ಅವಧಿಯಲ್ಲಿ ಯೋಜನೆಗೆ ಸೇರಬಯಸುವವರು ನಿಗದಿತ ನಮೂನೆಯಲ್ಲಿ ತಮ್ಮ ಉತ್ತಮ ಆರೋಗ್ಯದ ಬಗ್ಗೆ ಸ್ವಯಂ ಘೋಷಣೆಯನ್ನು ನೀಡುವುದರೊಂದಿಗೆ ಪೂರ್ಣ ವಾರ್ಷಿಕ ಪ್ರೀಮಿಯಮ್ ಮೊತ್ತವನ್ನು ಏಕಕಂತಿನಲ್ಲಿ ಪಾವತಿಸಬೇಕಾಗಬಹುದು.

**ನೋಂದಾವಣಾ ವಿಧಾನ**

ವಿಮೆಯು ಪ್ರತೀವರ್ಷ ಜೂನ್ ೧ರಿಂದ ಮುಂದಿನ ಮೇ ೩೧ರವರೆಗಿನ ಒಂದು ವರ್ಷದ ಅವಧಿಯದ್ದಾಗಿರುತ್ತದೆ.ಚಂದಾದಾರರಾಗಬಯಸುವವರು ನೋಂದಾವಣಾ ಅರ್ಜಿ ಹಾಗೂ ಸಂಬಂಧಿತ ಬ್ಯಾಂಕ್‌ನ ಉಳಿತಾಯ ಖಾತೆಯಿಂದ ಸ್ವಯಂಚಾಲಿತ ಕಟಾವಣೆಗೆ ಒಪ್ಪಿಗೆಪತ್ರವನ್ನು ನಿಗದಿತ ನಮೂನೆಯಲ್ಲಿ ಪ್ರತೀವರ್ಷ ಮೇ ೩೧ರೊಳಗಾಗಿ ನೀಡಬೇಕು.ಆರಂಭಿಕ ವರ್ಷಕ್ಕೆ ಮಾತ್ರ ಮೇಲೆ ತಿಳಿಸಿದ ರೀತಿಯಲ್ಲಿ ರಿಯಾಯಿತಿಯನ್ನು ನೀಡಲಾಗಿದ್ದು, ಪೂರ್ಣ ವಾರ್ಷಿಕ ಪ್ರೀಮಿಯಮ್ ಪಾವತಿ ಹಾಗೂ ಉತ್ತಮ ಆರೋಗ್ಯದ ಬಗ್ಗೆ ಸ್ವಯಂಘೋಷಣೆಯನ್ನು ನೀಡುವುದರೊಂದಿಗೆ ಅವಧಿ ಮೀರಿದ ನೋಂದಾವಣೆಯ ಪ್ರಯೋಜನವನ್ನು ಪಡೆಯಬಹುದಾಗಿದೆ.

ಯಾವುದೇ ಹಂತದಲ್ಲಿ ಯೋಜನೆಯಿಂದ ಹೊರಬರುವ ಫಲಾನುಭವಿಗಳು ನಿಗದಿತ ನಮೂನೆಯಲ್ಲಿ ತಮ್ಮ ಉತ್ತಮ ಆರೋಗ್ಯದ ಘೋಷಣೆ ನೀಡುವ ಮೂಲಕ ಭವಿಷ್ಯದಲ್ಲಿ ಬೇಕೆನಿಸಿದಾಗ ಮತ್ತೆ ಯೋಜನೆಗೆ ಸೇರ್ಪಡೆಗೊಳ್ಳಬಹುದು.

ಭವಿಷ್ಯದಲ್ಲಿ ಅರ್ಹತಾ ವರ್ಗಕ್ಕೆ ಹೊಸತಾಗಿ ಸೇರ್ಪಡೆಗೊಳ್ಳುವವರು ಅಥವಾ ಈ ಹಿಂದೆಯೇ ಅರ್ಹರಿದ್ದೂ ಈವರೆಗೆ ಸೇರ್ಪಡೆಗೊಳ್ಳದವರು ಅಥವಾ ಹಿಂದೆ ಯೋಜನೆಯ ಚಂದಾದಾರರಾಗಿದ್ದು, ಅರ್ಧದಲ್ಲಿ ನಿಲ್ಲಿಸಿದವರು ಯೋಜನೆಯ ಮುಂದುವರಿದ ಅವಧಿಯಲ್ಲಿ ಬೇಕೆನಿಸಿದಾಗ ತಮ್ಮ ಉತ್ತಮ ಆರೋಗ್ಯದ ಬಗ್ಗೆ ಸ್ವಯಂಘೋಷಣೆಯನ್ನು ಸಲ್ಲಿಸುವುದರೊಂದಿಗೆ ಯೋಜನೆಗೆ ಸೇರ್ಪಡೆಗೊಳ್ಳಲು ಅವಕಾಶವಿದೆ.

**ಸೌಲಭ್ಯಗಳು**

ಸದಸ್ಯರ ಮರಣವು ಯಾವುದೇ ಕಾರಣದಿಂದ ಸಂಭವಿಸಿದರೂ ರೂ.೨ ಲಕ್ಷದ ವಿಮಾಮೊತ್ತವನ್ನು ಈ ಯೋಜನೆಯಡಿ ಪಾವತಿಸಲಾಗುವುದು.

**ಪ್ರೀಮಿಯಮ್**

ಒಬ್ಬ ಸದಸ್ಯರ ವಾರ್ಷಿಕ ಪ್ರೀಮಿಯಮ್ ಮೊತ್ತ ರೂ. ೩೩೦.೦೦. ಇದನ್ನು ಪ್ರತೀವರ್ಷ ಮೇ ೩೧ರೊಳಗಾಗಿ ಖಾತಾದಾರರ ಉಳಿತಾಯ ಖಾತೆಯಿಂದ ಸ್ವಯಂಚಾಲಿತ ಕಟಾವಣೆಯ ಸೌಲಭ್ಯದ ಮೂಲಕ ಏಕಕಂತಿನಲ್ಲಿ ಕಡಿತಗೊಳಿಸಲಾಗುತ್ತದೆ. ಮೇ ೩೧ರ ಬಳಿಕ ಪೂರ್ಣ ವಾರ್ಷಿಕ ಪ್ರೀಮಿಯಮ್ ಪಾವತಿ ಹಾಗೂ ಉತ್ತಮ ಆರೋಗ್ಯದ ಬಗ್ಗೆ ಸ್ವಯಂಘೋಷಣೆಯನ್ನು ನೀಡುವುದರೊಂದಿಗೆ ಆ ಅವಧಿಯ ನೋಂದಾವಣೆಯನ್ನು ಮಾಡಬಹುದಾಗಿದೆ.ಮುಂದಿನ ವರ್ಷಗಳ ವಿಮಾ ಕ್ಲೇಮುಗಳು ಆಧಾರದ ಮೇಲೆ ಪ್ರೀಮಿಯಮ್ ಮೊತ್ತವನ್ನು ಪರಿಷ್ಕರಿಸಲಾಗುವುದು.ಆದರೂ, ಅನಿರೀಕ್ಷಿತ ವಿಪರೀತ ಸಂದರ್ಭಗಳನ್ನು ಹೊರತುಪಡಿಸಿ, ಮೊದಲ ಮೂರು ವರ್ಷಗಳಲ್ಲಿ ಪ್ರೀಮಿಯಮ್ ಮೊತ್ತದಲ್ಲಿ ಹೆಚ್ಚಳವಾಗದೆ ಇರುವ ರೀತಿಯಲ್ಲಿ ಪ್ರಯತ್ನಗಳನ್ನು ಮಾಡಲಾಗುವುದು.

**ಅರ್ಹತಾ ಶರತ್ತುಗಳು**

ಅ) ಯೋಜನೆಯ ಭಾಗೀದಾರ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರುವ೧೮ ವರ್ಷ (ಪೂರ್ಣಗೊಂಡಿರುವ) ಮತ್ತು ೫೦ ವರ್ಷ (ಹುಟ್ಟಿದ ದಿನಾಂಕದ ಸಮೀಪದ ವಯಸ್ಸು) ಗಳ ನಡುವಿನ ವಯೋಮಿತಿಯ ಯೋಜನೆಗೆ ಸೇರ್ಪಡೆಗೊಳ್ಳಲು ಹಾಗೂ ತಮ್ಮ ಖಾತೆಯಿಂದ ಸ್ವಯಂಚಾಲಿತ ಕಟಾವಣೆಗೊಳಿಸಲು ಒಪ್ಪಿಗೆ ನೀಡುವ ಎಲ್ಲರೂ ಯೋಜನೆಯಡಿ ನೋಂದಾಯಿತರಾಗುತ್ತಾರೆ.

ಬ) ಆರಂಭಿಕ ನೋಂದಾವಣಾ ಅವಧಿಯ ಬಳಿಕ ಅಂದರೆ, ೩೧ ಆಗಸ್ಟ್ ೨೦೧೫ರವರೆಗೆ ಅಥವಾ ೩೦ ನವೆಂಬರ್ ೨೦೧೫ರವರೆಗಿನ ಅವಧಿಯಲ್ಲಿ ನೋಂದಾವಣೆ ಬಯಸುವವರು, ತಾವು ನೋಂದಾವಣಾ ದಿನಾಂಕದಂದಾಗಲೀ ಅದಕ್ಕಿಂತ ಹಿಂದಾಗಲೀ ಯಾವುದೇ ಗಂಭೀರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿಲ್ಲ ಎಂಬ ಬಗ್ಗೆ ನಿಗದಿತ ನಮೂನೆಯಲ್ಲಿನ ಉಲ್ಲೇಖಾನುಸಾರ ಒಪ್ಪಿಗೆ/ ಘೋಷಣೆಯನ್ನು ನೀಡಬೇಕು.

**ಮಾಸ್ಟರ್ ಪಾಲಿಸಿದಾರರು**

ಭಾಗೀದಾರ ಬ್ಯಾಂಕ್‌ಗಳು ಮಾಸ್ಟರ್ ಪಾಲಿಸಿದಾರರು ಅನ್ನಿಸಿಕೊಳ್ಳುತ್ತವೆ. ಭಾರತೀಯ ಜೀವ ವಿಮಾ ನಿಗಮ/ ಇತರ ವಿಮಾ ಕಂಪೆನಿಗಳು ಬ್ಯಾಂಕುಗಳೊಂದಿಗೆ ಸಮಾಲೋಚಿಸಿ, ಒಂದು ಸರಳ ಹಾಗೂ ಚಂದಾದಾರ ಸ್ನೇಹಿ ಆಡಳಿತ ಮತ್ತು ಕ್ಲೇಮು ಪಾವತಿ ಪ್ರಕ್ರಿಯೆಯನ್ನು ನಿರ್ವಹಿಸುತ್ತವೆ.

**ಭರವಸೆಯ ಮುಕ್ತಾಯ**

ಸದಸ್ಯರ ಜೀವವಿಮಾ ಭರವಸೆಯು ಈ ಕೆಳಗಿನ ಯಾವುದೇ ಸಂದರ್ಭಗಳಲ್ಲಿ ಕೊನೆಗೊಳ್ಳುತ್ತದೆ ಹಾಗೂ ಅನಂತರ ಯಾವುದೇ ರೀತಿಯ ಸೌಲಭ್ಯಗಳ ಪಾವತಿಯಾಗುವುದಿಲ್ಲ.

೧) ಸದಸ್ಯರು ೫೫ರ ಪ್ರಾಯಕ್ಕೆ ತಲಪಿದಾಗ (ಹುಟ್ಟಿದ ದಿನಾಂಕದ ಸಮೀಪದ ವಯಸ್ಸು), ಆವರೆಗೆ ಸತತವಾಗಿ ಪ್ರತೀವರ್ಷ ವಾರ್ಷಿಕ ನವೀಕರಣ ಮಾಡಿದ್ದಲ್ಲಿ (೫೦ ವರ್ಷದ ಬಳಿಕ ಯೋಜನೆಗೆ ಸೇರ್ಪಡೆಗೊಳ್ಳುವ ಅವಕಾಶ ಖಂಡಿತಾ ಇರುವುದಿಲ್ಲ)

೨) ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸಿದಾಗ ಅಥವಾ ವಿಮೆಯನ್ನು ಚಾಲ್ತಿಯಲ್ಲಿಡಲು ಸಾಕಷ್ಟು ಮೊತ್ತದ ಶಿಲ್ಕು ಲಭ್ಯವಿಲ್ಲದಿದ್ದಾಗ

೩) ಭಾರತೀಯ ಜೀವವಿಮಾ ನಿಗಮ/ ಇತರ ಕಂಪೆನಿಗಳ ಮೂಲಕ ಒಬ್ಬ ಸದಸ್ಯರ ಒಂದಕ್ಕಿಂತ ಹೆಚ್ಚು ಖಾತೆಗಳು ಸದ್ರಿ ಯೋಜನೆಗೆ ಒಳಗೊಂಡಿದ್ದು, ಆ ಎಲ್ಲ ಖಾತೆಗಳಿಂದ ಬೇರೆ ಬೇರೆ ಕಂಪೆನಿಗಳಿಗೆ ಪ್ರೀಮಿಯಮ್ ಮೊತ್ತ ಪಾವತಿಯಾಗುತ್ತಿದ್ದಲ್ಲಿ ವಿಮಾ ವ್ಯಾಪ್ತಿಯನ್ನು ರೂ. ೨ ಲಕ್ಷಗಳಿಗೆ ಸೀಮಿತಗೊಳಿಸಲಾಗುವುದು ಹಾಗೂ ಹೆಚ್ಚುವರಿ ಪಾವತಿಗೊಂಡ ಪ್ರೀಮಿಯಮ್ ಮೊತ್ತ'ವನ್ನು ಸದಸ್ಯರು ಕಳಕೊಳ್ಳಬೇಕಾಗುತ್ತದೆ.

೪) ಪಾವತಿ ದಿನಾಂಕದಂದು ಸಾಕಷ್ಟು ಶಿಲ್ಕು ಖಾತೆಯಲ್ಲಿ ಲಭ್ಯವಿಲ್ಲದೆ ಇರುವುದೇ ಮುಂತಾದ ಯಾವುದೇ ತಾಂತ್ರಿಕ ಕಾರಣಗಳಿಂದ ಅಥವಾ ಇತರ ಯಾವುದೇ ಆಡಳಿತಾತ್ಮಕ ಸಮಸ್ಯೆಗಳಿಂದಾಗಿ ವಿಮೆಯು ಸ್ಥಗಿತಗೊಂಡಲ್ಲಿ ಉತ್ತಮ ಆರೋಗ್ಯದ ಘೋಷಣೆ ಹಾಗೂ ಪೂರ್ಣ ವಿಮಾ ಮೊತ್ತವನ್ನು ಜಮೆಗೊಳಿಸುವ ಮೂಲಕ ಮತ್ತೆ ರೂ. ೨ ಲಕ್ಷಗಳಿಗೆ ವಿಮೆಯನ್ನು ಚಾಲ್ತಿಗೆ ತರಬಹುದಾಗಿದೆ.

೫) ನಿಯಮಿತ ನೋಂದಾವಣೆಗಳ ಪ್ರಕರಣಗಳಲ್ಲಿ ಪ್ರತೀವರ್ಷ ಜೂನ್ ೩೦ರಂದು ಅಥವಾ ಅದಕ್ಕೂ ಮೊದಲು ಮತ್ತು ಉಳಿದ ಪ್ರಕರಣಗಳಲ್ಲಿ ಪ್ರೀಮಿಯಮ್ ವಸೂಲಾದ ಅದೇ ತಿಂಗಳಲ್ಲಿ ಪ್ರೀಮಿಯಮ್ ಮೊತ್ತವನ್ನು ಭಾಗೀದಾರ ಬ್ಯಾಂಕ್‌ಗಳು ವಿಮಾ ಕಂಪೆನಿಗಳಿಗೆ ಜಮೆ ಮಾಡುತ್ತವೆ

**ಆಡಳಿತ**

ಭಾರತೀಯ ಜೀವವಿಮಾ ನಿಗಮ/ ಇತರ ವಿಮಾ ಕಂಪೆನಿಗಳ ಆಡಳಿತ ವ್ಯವಸ್ಥೆಗಳು ಸದ್ರಿ ಯೋಜನೆಯ ಆಡಳಿತವನ್ನು ನೋಡಿಕೊಳ್ಳುತ್ತವೆ. ಮಾಹಿತಿಸಂವಹನ ಹಾಗೂ ಮಾಹಿತಿ ಸಂಗ್ರಹಣೆಯ ನಿಗದಿತ ನಮೂನೆಗಳ ಬಗ್ಗೆ ಪ್ರತ್ಯೇಕವಾಗಿ ತಿಳಿಸಲಾಗುವುದು.

ಖಾತಾದಾರರ ಆಯ್ಕೆಯಂತೆ ಸ್ವಯಂ ಚಾಲಿತ ಕಟಾವಣೆಯ ಮೂಲಕ ಪಾವತಿ ದಿನಾಂಕದಂದು ಅಥವಾ ಮುಂಚಿತವಾಗಿ ಏಕಕಂತಿನಲ್ಲಿ ವಾರ್ಷಿಕ ಪ್ರೀಮಿಯಮ್ ಅನ್ನು ವಸೂಲು ಮಾಡುವುದು ಭಾಗೀದಾರ ಬ್ಯಾಂಕ್‌ಗಳ ಜವಾಬ್ದಾರಿಯಾಗಿರುತ್ತದೆ.

ಸದಸ್ಯರು ಕೂಡಾ ಯೋಜನೆಯು ಚಾಲ್ತಿಯಲ್ಲಿರುವವರೆಗೆ ಪ್ರತೀವರ್ಷ ಸ್ವಯಂಚಾಲಿತ ಕಟಾವಣೆಯ ಮೂಲಕ ತಮ್ಮ ಪ್ರೀಮಿಯಮ್ ಮೊತ್ತವನ್ನು ವಸೂಲು ಮಾಡುವಂತೆ ಬ್ಯಾಂಕ್‌ಗಳಿಗೆ ಶಾಶ್ವತ ದೃಢೀಕರಣವನ್ನು ನೀಡಬಹುದು.

ನೋಂದಣಾ ಅರ್ಜಿ, ಸ್ವಯಂಚಾಲಿತ ಕಟಾವಣಾ ದೃಢೀಕರಣ/ ಒಪ್ಪಿಗೆ ಅಥವಾ ಘೋಷಣಾಪತ್ರಗಳ ನಿಗದಿತ ನಮೂನೆಗಳನ್ನು ಭಾಗೀದಾರ ಬ್ಯಾಂಕ್‌ಗಳಿಂದ ಪಡಕೊಳ್ಳಬಹುದು ಹಾಗೂ ಮುಂದೆ ಬ್ಯಾಂಕ್‌ಗಳಲ್ಲಿಯೇ ಅವುಗಳನ್ನು ಇರಿಸಲಾಗುವುದು.ಕ್ಲೇಮುಗಳ ಸಂದರ್ಭದಲ್ಲಿ ಈ ಎಲ್ಲ ದಾಖಲೆಗಳನ್ನು ಹಾಜರುಪಡಿಸುವಂತೆಭಾರತೀಯ ಜೀವವಿಮಾ ನಿಗಮ/ ವಿಮಾ ಕಂಪೆನಿಗಳು ಬ್ಯಾಂಕ್‌ಗಳನ್ನು ಕೋರಬಹುದು.ಅಲ್ಲದೇ ಯಾವುದೇ ಸಮಯದಲ್ಲಿ ಈ ದಾಖಲೆಗಳನ್ನು ಕೋರುವ ಅಧಿಕಾರವು ಭಾರತೀಯ ಜೀವವಿಮಾ ನಿಗಮ/ ವಿಮಾ ಕಂಪೆನಿಗಳಿಗಿದೆ.

ವಿಮಾ ಪ್ರಮಾಣಪತ್ರದಂದಿಗೇ ಸ್ವೀಕೃತಿಪತ್ರವೊಂದನ್ನು ನೀಡಬಹುದು.

ವಾರ್ಷಿಕ ಸಮೀಕ್ಷೆಯ ಆಧಾರದ ಮೇಲೆ ಈ ಯೋಜನೆಯ ಮರುಮೌಲ್ಯಮಾಪನ ನಡೆಸಿ, ಪ್ರೀಮಿಯಮ್ ಪ್ರಮಾಣವನ್ನು ಪುನರ್ ನಿರ್ಧರಿಸಲಾಗುವುದು.

**ಪ್ರೀಮಿಯಮ್‌ನ ಪ್ರಮಾಣ**

೧) ಭಾರತೀಯ ಜೀವವಿಮಾ ನಿಗಮ/ ವಿಮಾ ಕಂಪೆನಿಯ ಪ್ರೀಮಿಯಮ್: ವಾರ್ಷಿಕ ರೂ. ೨೮೯.೦೦

೨) ಇತರ ಏಜೆಂಟರ ವೆಚ್ಚದ ಮರುಪಾವತಿ: ಸದಸ್ಯರೊಬ್ಬರಿಗೆ ವಾರ್ಷಿಕ ರೂ. ೩೦.೦೦

೩) ಭಾಗೀದಾರ ಬ್ಯಾಂಕ್‌ಗಳ ಆಡಳಿತ ವೆಚ್ಚದ ಮರುಪಾವತಿ: ಸದಸ್ಯರೊಬ್ಬರಿಗೆ ವಾರ್ಷಿಕ ರೂ. ೧೧.೦೦

ಯೋಜನೆಯ ಜಾರಿಯ ಪ್ರಸ್ತಾವಿತ ದಿನಾಂಕ ೧ ಜೂನ್ ೨೦೧೫.ಮುಂದಿನ ವಾರ್ಷಿಕ ನವೀಕರಣ ದಿನಾಂಕ ಪ್ರತೀವರ್ಷದ ಜೂನ್ ೧ ಆಗಿರುತ್ತದೆ.

ಯಾವುದೇ ಅನಿರೀಕ್ಷಿತ ಕಾರಣಗಳಿಂದಾಗಿ ಯೋಜನೆಯನ್ನು ರದ್ದುಗೊಳಿಸಬೇಕಾಗಿ ಬಂದಲ್ಲಿ ಮುಂದಿನ ನವೀಕರಣ ದಿನಾಂಕಕ್ಕೆ ಮುಂಚಿತವಾಗಿ ಯೋಜನೆಯನ್ನು ಕೊನೆಗೊಳಿಸಲಾಗುವುದು.